# ತಿರುಕನ ಕನಸು

ಭಾರತೀಯ ಸಮಾಜದ ವಿನ್ಯಾಸ ಮೊದಲಿನಿಂದಲೂ ಬೆರಗು ಹುಟ್ಟಿಸುವಂತಹ ಪರಂಪರೆಯನ್ನು ತನ್ನ ಗರ್ಭದಲ್ಲಿಟ್ಟುಕೊಂಡಿದೆ. ಮೂಲಗಳನ್ನು ಕೆದಕಿದರೆ ಅಚ್ಚರಿಯೆನಿಸುವಂತಹ ಸಂಗತಿಗಳು ಹೊರಬರುತ್ತವೆ. ಒಂದು ಕಡೆ ಕೊಲ್ಲುವ ಕೆಡಕುತನವಿದ್ದರೆ ಇನ್ನೊಂದೆಡೆ ಕಾಯುವ ತಾಯ್ತನವಿರುತ್ತದೆ. ಒಂದು ಕಡೆ ಕೆಡಹುವವರು ವಿಜೃಂಭಿಸಿದರೆ ಇನ್ನೊಂದು ಕಡೆ ಕಟ್ಟುವ ಕರಣಿಕೆ ಶ್ರೀರಕ್ಷೆ ನೀಡುತ್ತದೆ. ಒಂದು ಕಡೆ ಸನಾತನ ವಾದ ಬೊಬ್ಬಿರಿಸಿದರೆ ಇನ್ನೊಂದು ಕಡೆ ಸುಧಾರಣಾವಾದ ಮಂದಹಾಸ ಬೀರುತ್ತದೆ. ಇಂತಹ ಐತಿಹ್ಯ, ಚರಿತ್ರೆ ಉಳ್ಳಂತಹ ನಮ್ಮ ಪರಂಪರೆಯಲ್ಲಿ ಬುದ್ಧ, ಬಸವ, ಗಾಂಧಿಯಂತಹ ಚೈತನ್ಯಗಳು ವಿಶೇಷ ಸ್ಥಾನ ಪಡೆಯುತ್ತಾರೆ.

ದಾಸ ಸಾಹಿತ್ಯದಲ್ಲಿ ಕನಕದಾಸನ ಧ್ವನಿ ವಿಶಿಷ್ಟವಾದುದು. ಕರಿಯೂ, ಕವಿಯೂ, ದಾಸನೂ ಆಗಿದ್ದ ಕನಕ ಸಂಸಾರಿಯಾಗಿದ್ದವನು. ಬದುಕಿನ ಏರಿಳಿತಗಳಲ್ಲಿ ಮಾಗಿ ವಿರಾಗಿಯಾದವನು. ದೈವಕೃಪೆಗೆ ಹಂಬಲಿಸಿ ದಾಸನಾದವನು. ಇತರರಂತೆ ರಾಮಾಯಣ, ಮಹಾಭಾರತ, ಕಥಾಪ್ರಸಂಗಗಳನ್ನು ಬಳಸಿಕೊಂಡರೂ ಹೊಸ ಸಾಲದ ಅಗತ್ಯಕ್ಕೆ ತಕ್ಕಂತೆ ಚಿತ್ರಿಸಿರುವುದಲ್ಲದೆ ಜನ ಮೆಚ್ಚುವಂತೆ ಬರೆದವನು. ಏಕಕಾಲಕ್ಕೆ ಕಾವ್ಯಧರ್ಮ, ಯುಗಧರ್ಮ ಹಾಗೂ ಮೌಲ್ಯಪಲ್ಲಟಗಳನ್ನು ಅವನ ಕಾವ್ಯದಲ್ಲಿ ಕಾಣಬಹುದು.

ಕನಕದಾಸರು ತಮ್ಮ ಕವಿತೆಗಳಲ್ಲಿ ಪ್ರಾಣಿಗಳಾದ ಆನೆ, ಕುದುರೆ ಕುರಿತಂತೆ ವಿಶೇಷವಾಗಿ ಪ್ರಸ್ತಾಪ ಮಾಡುತ್ತಾರೆ. ಪ್ರಾಣಿಗಳ ಬಗ್ಗೆ ಒಲವಿರುವವರು ಅವುಗಳ ಸಂಗವನ್ನು ಕುರಿತಂತೆ ಮೇಲಿಂದ ಮೇಲೆ ಮಾತನಾಡುತ್ತಿರುತ್ತಾರೆ. ಅರಸರು ಅಶ್ವಶಾಸ್ತ್ರ, ಗಜಶಾಸ್ತ್ರವನ್ನು ಬಲ್ಲವರಾಗಿದ್ದು ಕುದುರೆಯ, ಆನೆಯ ಜೊತೆ ಸಂವಾದ ನಡೆಸಬಲ್ಲವರು, ಅವುಗಳ ಅಂತರ್ಯ ಬಲ್ಲವರೂ ಆಗಿರುತ್ತಾರೆ. ಕನಕದಾಸ ಬಾಡದ ದೊರೆಯಾಗಿದ್ದ ಸಂದರ್ಭದಲ್ಲಿ ವಿಜಯನಗರದ ಅರಸರ ಗಜಸೇನೆ ಜಗತ್ಪ್ರಸಿದ್ಧವಾಗಿತ್ತು. ಕನಕದಾಸನ ರಚನೆಗಳಲ್ಲಿ ಆನೆಯನ್ನು ಕುರಿತಂತೆ ಮೇಲಿಂದ ಮೇಲೆ ಪ್ರಸ್ತಾಪ ಬರುತ್ತದೆ. ಒಮ್ಮೆ ಕನಕದಾಸ ನಂಜನಗೂಡಿನ ಶ್ರೀಕಂಠೇಶ್ವರನ ದರ್ಶನಕ್ಕೆ ಹೋಗುವ ಹಾದಿಯಲ್ಲಿನ ಅರಣ್ಯದಲ್ಲಿ ಭಯಂಕರವಾದ ಮದಿಸದ ಆನೆಯೊಂದು ಜನರಿಗೆ ಪೀಡನೆಯನ್ನು ಉಂಟು ಮಾಡುತ್ತಿತ್ತು. ಕನಕದಾಸ ಆ ಕಾಡಿನ ಜನರಿಗೆ ಗಜೇಂದ್ರ ಮೋಕ್ಷವೆಂಬ ಕಾವ್ಯದ ಕಥೆ ಹೇಳಿದನೆಂಬ ಪ್ರತೀತಿಯಿದೆ. ಆ ಆನೆಯನ್ನು ವಶಮಾಡಿಕೊಂಡ ಕನಕ ಅದನ್ನು ನಂಜನಗೂಡಿನ ದೇವಾಲಯಕ್ಕೆ ಒಪ್ಪಿಸುತ್ತಾನೆ. ರಾಜನಾದ ಇಂದ್ರ ದ್ರುಮ್ನ ಅಗಸ್ತ್ಯ ಮುನಿಯ ಶಾಪಕ್ಕೆ ಒಳಗಾಗಿ ಆನೆಯಾಗುತ್ತಾನೆ. ಕಾಡಿನಲ್ಲಿ ಸ್ವಚ್ಛಂದ ಸಲಗನಾಗಿ ಅವನು ಜೀವನ ನಡೆಸುತ್ತಾ ಮೋಕ್ಷ ಪಡೆಯುವುದೇ ಕಥಾವಸ್ತು.

ಬಹಳಷ್ಟು ಕೀರ್ತನೆಗಳಲ್ಲಿ ತನ್ನ ದೈವ, ಸಂಗಾತಿಯಾದ ಕೇಶವನನ್ನು ಆನೆಯೆಂಬ ರೂಪಕದ ರೂಪದಲ್ಲಿ ಕನಕ ಕಂಡುಕೊಳ್ಳುತ್ತಾನೆ. ದೈತ್ಯಶಕ್ತಿಯುಳ್ಳ ಆನೆ ಶತ್ರುಗಳನ್ನು ಸಂಹರಿಸುವಂತಾದ್ದಾಗಿದೆ. ಆ ಆನೆ ಮದ್ದಾನೆ, ಪುಟ್ಟಾನೆ, ಚೆಲುವಾನೆ, ಪಟ್ಟದಾನೆ, ನಿಜದಾನೆ, ಸೊಕ್ಕಿದಾನೆ – ಹೀಗೆ ಮದವನ್ನು ಮುರಿಯಬಲ್ಲ ಸರ್ವಶಕ್ತ ದೈವದ ಪ್ರತಿನಿಧಿ ಎಂಬಂತೆ ಕನಕ ಚಿತ್ರಿಸುತ್ತಾನೆ. 'ಆನೆ ಬರುತಾದೆ ನೋಡಮ್ಮ ಮದ್ದಾನೆ ಬರುತಾದೆ/ ಆನೆಯ ನೋಡಿರಯ್ಯ ನೀವೆಲ್ಲರು, ಆನಂದ ಪಡೆಯಿರಯ್ಯ/ ಆನೆ ಬಂದಿದೆ ಇದಿಗೊ ಮದ್ದಾನೆ, ಜ್ಞಾನಿಗಳೊಳಾಡುವ ಮದ್ದಾನೆ'– ಈ ಮುಂತಾದ ಕೀರ್ತನೆಗಳು ದೈವದ ಪ್ರತಿನಿಧಿಯಂತೆ ಆನೆಯನ್ನು ಚಿತ್ರಿಸುತ್ತದೆ.

ನಾವು ಬಾಲ್ಯದಲ್ಲಿ ಕೇಳಿದ, ಓದಿದ ಮುಪ್ಪಿನ ಷಡಕ್ಷರಿಯ ಪ್ರಸಿದ್ಧವಾದ ಒಂದು ರಚನೆಯೂ ಸಹ ಆನೆಯ ಪ್ರೀತಿಯನ್ನು ಕುರಿತು ಹೇಳುವಂತದ್ದೇ ಆಗಿದೆ. ಈ ಕವಿತೆ ಬಹುಶಃ ಕನ್ನಡದ ಜನರ ಎದೆಯಲ್ಲಿ ನಿಂತ, ಎಲ್ಲರೂ ಓದಿದ ರಚನೆಯಾಗಿದೆ. 'ತಿರುಕನ ಕನಸು' ಎಂಬ ರಚನೆಯನ್ನು ಮಕ್ಕಳ ಕವಿತೆಗಳ ಸಾಲಿಗೆ ಸೇರಿಸಲಾಗಿದೆ. ಧರೆಯ ಭೋಗ, ಭಾಗ್ಯಗಳು ಎಂದಿಗೂ ಶಾಶ್ವತವಲ್ಲ. ನೀರ ಗುಳ್ಳೆಯಂತೆ ಅವು ಕರಗಿಹೋಗುವಂತವು. ಕರಗಿ ಹೋಗುವ ಸುಖಕ್ಕೆ ಸೋತು ಶಾಶ್ವತವಾದ ಹರಿಯ ಭಕ್ತಿಸುಖವನ್ನು ಮರೆಯಬೇಡ ಎಂದು ಹೇಳುವಲ್ಲಿ ಈ ಕವಿತೆ ರಚನೆಯಾಗಿದೆ.

'ತಿರುಕನ ಕನಸು' ಎಂಬ ಕವಿತೆಯನ್ನೇ ಈಗ ರೂಪಕವೆನ್ನುವಂತೆ ಬಳಸಲಾಗುತ್ತಿದೆ. ಅಶಕ್ತರು, ದುರ್ಬಲರು ಕಾಣುವ ಕನಸು ಎಂದಿಗೂ ನನಸಾಗುವುದಿಲ್ಲ. ಅದು ಕೇವಲ ಕನಸಷ್ಟೇ ಆಗಿದೆ. ಕನಸು ಒಡೆದ ನಂತರ ಅದೇ ವಾಸ್ತವದ ಜಗತ್ತು ಕಣ್ಣ ಎದುರು ಪ್ರತ್ಯಕ್ಷವಾಗುತ್ತದೆ. ಈ ಕವಿತೆಯಲ್ಲಿಯೂ ಸಹ ಆನೆಯೊಂದು ತನ್ನ ಸೊಂಡಿಲಿನಲ್ಲಿ ಹಿಡಿದ ಹಾರವನ್ನು ತನ್ನ ಕೊರಳಿಗೆ ಹಾಕಿದಂತೆ ತಿರುಕನೊಬ್ಬ ಕನಸು ಕಾಣುತ್ತಾನೆ. ಆ ರಾಜ್ಯದ ಅರಸ ಸತ್ತು, ಅವನಿಗೆ ಸಂತಾನವಿಲ್ಲದ ಕಾರಣ ತಿರುಕನೇ ಅರಸನಾಗುತ್ತಾನೆ. ಧರ್ಮಶಾಲೆಯಲ್ಲಿ ಮಲಗಿ ಕನಸು ಕಾಣುತ್ತಿದ್ದ ತಿರುಕ ಈಗ ಅರಸನ ಅರಮನೆಯಲ್ಲಿದ್ದಾನೆ. ಅವನಿಗೆ ಪಟ್ಟ ಕಟ್ಟಲಾಗಿದೆ. ಪಟ್ಟದರಸಿ ಪಕ್ಕದಲ್ಲಿದ್ದಾಳೆ. ಅವರಿಗೆ ಮಕ್ಕಳಾಗುತ್ತಾರೆ. ಆಳ್ವಿಕೆ ನಡೆಸುತ್ತಾನೆ. ಮುಂದುವರೆದು ಅವನ ಬೆಳೆದ ಮಕ್ಕಳಿಗೆ ಮದುವೆಯನ್ನು ಸಹ ಮಾಡುತ್ತಾನೆ. ಆದರೆ ಎಲ್ಲಿಯೂ ಪರಾಕ್ರಮಿಯಾಗಿ ಅವನು ಯುದ್ಧ ಮಾಡುವ ಕನಸು ಕಾಣುವುದಿಲ್ಲ. ಇದ್ದಕ್ಕಿದಂತೆ ಶತ್ರುಪಡೆ ಅರಮನೆಯನ್ನು ಮುತ್ತಿದಾಗ ದಿಗಿಲಿನಿಂದ ಕಣ್ಣ ತೆರೆಯುತ್ತಾನೆ. ಎಂದಿನಂತೆ ತಾನು ಧರ್ಮಶಾಲೆಯಲ್ಲಿಯೇ ಮಲಗಿದ್ದಾನೆ. ಇದು ತಳಪಾಯವಿಲ್ಲದೆಯೇ ಮಲಗಿದ್ದಾನೆ. ಇದು ತಳಪಾಯವಿಲ್ಲದೆಯೆ ಕಟ್ಟಿದ ಕನಸ್ಸಾದ್ದರಿಂದ ಕುಸಿದು ಬೀಳುತ್ತದೆ.

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಆನೆಯನ್ನು ಕೃಷ್ಣನ ಪ್ರತಿರೂಪವಾಗಿ 'ಕೃಷ್ಣಶಕ್ತಿ' ಎಂಬಂತೆ ಕಾಣುತ್ತಾರೆ. ದೇವಕುಂಜದ ಅಸುರ ಶಕ್ತಿಯ ದಮನಕ್ಕಾಗಿ, ದುಷ್ಟಶಕ್ತಿಗಳ ನಿಗ್ರಹಕ್ಕಾಗಿ ಜನ್ಮತಳೆದಿದೆ. ಹೀಗಾಗಿ ಜಿಎಸ್ಎಸ್ ಬರೆದಿರುವಂತೆ 'ಸುತ್ತಮುತ್ತ ಅಂಧಕಾರ/ ಮಳೆಹನಿಗಳ ಪಂಜರ!/ ದೈತ್ಯ ಸೆರೆಯ ಕಂಬಿಯೊಳಗೆ/ ಬಂತು ದೇವ ಕುಂಜರ!' ಎಂದೇ ಗುರುತಿಸಿದ್ದಾರೆ. ಕನಕ ಕೃಷ್ಣನನ್ನು ಆನೆಯ ರೂಪದಲ್ಲಿ ನಿಸ್ಸೀಮವಾದ ದೈತ್ಯಶಕ್ತಿಯನ್ನಾಗಿಯೇ ನೋಡಿದ್ದಾನೆ.

■ **ಅಮೃತಮತಿ**

## ಮಾತೇ ಮುತ್ತು

- ನಿಮ್ಮಲ್ಲಿ ಅಹಂಕಾರವಿಲ್ಲದಿದ್ದರೆ ನೀವು ಯಾವ ಧರ್ಮ ಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ, ಮೋಕ್ಷ ಪದವನ್ನು ಪಡೆಯಬಹುದು.
  —ಸ್ವಾಮಿ ವಿವೇಕಾನಂದ
- ಈ ಶರೀರವೇ ಹರ ಮಂದಿರ.
  —ಗುರುನಾನಕ್
- ಎಲ್ಲ ಮತಗಳಿಗಿಂತ ಶುದ್ಧ ಹೃದಯದ ಸನ್ಮತಿಯ ಮತವೇ ಮಹೋನ್ನತವಾದದ್ದು.
  —ಕುವೆಂಪು
- ನಮ್ಮ ಪೂರ್ಣ ಅಸ್ತಿತ್ವದ ಸತ್ಯವೇ ಧರ್ಮ. ಅನಂತತೆಯೊಡನೆ ನಮ್ಮ ವೈಯಕ್ತಿಕ ಸಂಬಂಧದ ಜ್ಞಾನವೇ ಧರ್ಮ. ಅದು ನಮ್ಮ ಜೀವನದ ಗುರುತ್ವಕೇಂದ್ರ.
  —ರವೀಂದ್ರನಾಥ ಟ್ಯಾಗೋರ್
- ಹೇಗೆ ಒಂದೇ ಚಕ್ರದಿಂದ ರಥ ಮುಂದೆ ಸಾಗದೋ ಹಾಗೆ ಮನುಷ್ಯ ಪ್ರಯತ್ನವಿಲ್ಲದೆ ದೈವ ಬಲದಿಂದಲೇ ಯಶಸ್ಸು ಬರದು.
  —ಹಿತೋಪದೇಶ
- ಧರ್ಮ ಎಂದರೆ ನಂಬಿಕೆಯಲ್ಲ, ನಂಬಿದ್ದರ ಅಡಚಣೆ.
  —ಖಲೀಲ್ ಗಿಬ್ರಾನ್
- ತಾಯಿಯನ್ನು ಗೌರವಿಸಿದರೆ ದೇವರ ಕರುಣೆ ಲಭಿಸುತ್ತದೆ.
  —ಮಹಮ್ಮದ್ ಪೈಗಂಬರ್
- ದೇವರ ಪ್ರೀತಿ ಗಳಿಸಲು ಸುಲಭವಾದ ಮಾರ್ಗ ಒಂದಿದೆ. ಅದು ದೇವರಿಂದ ಸೃಷ್ಟಿಯಾದ ಎಲ್ಲರನ್ನೂ ಎಲ್ಲವನ್ನೂ ಪ್ರೀತಿಸುವುದು.
  —ಯೇಸು ಕ್ರಿಸ್ತ